## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 129 |
| ಸದಸ್ಯರ ಹೆಸರು | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.02.2023. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪ್ರಸ್ತುತ ಎಷ್ಟು ಮರಳು ಗಣಿಗಾರಿಕೆಗೆ ಪರವಾನಿಗೆ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non-CRZ) ಪ್ರದೇಶದ IV, V ಮತ್ತು ಉನ್ನತ ಶ್ರೇಣಿ ಹಳ್ಳ/ನದಿಗಳ ಪಾತ್ರಗಳಲ್ಲಿ ಟೆಂಡರ್ -ಕಂ -ಹರಾಜು ಮೂಲಕ 21 ಮರಳು ಬ್ಲಾಕ್ ಗಳಿಗೆ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದ್ದು, ಸಂಪೂರ್ಣ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>(see table below) |
| ಆ) | 2018 ರಿಂದ ಮರಳು ಗಣಿಗಾರಿಕೆಯಿಂದ ಬಂದ ವಾರ್ಷಿಕ ಆದಾಯವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | 2018-19 ನೇ ಸಾಲಿನಿಂದ ಇಲ್ಲಿಯವರೆಗೆ ದಕ್ಷಿಣ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆಯಿಂದ ತಾಲ್ಲೂಕುವಾರು ಸಂಗ್ರಹಿಸಲಾದ ರಾಜಧನ, ಎಪಿಪಿ ಮೊತ್ತದ ವರ್ಷವಾರು ವಿವರಗಳು ಈ ಕೆಳಕಂಡಂತಿವೆ. |

| ಕ್ರ. ಸಂ | ತಾಲ್ಲೂಕು | ಮರಳು ಗುತ್ತಿಗೆ ಸಂಖ್ಯೆ |
|---|---|---|
| 1 | ಬಂಟ್ವಾಳ | 3 |
| 2 | ಬೆಳ್ತಂಗಡಿ | 5 |
| 3 | ಮಂಗಳೂರು | 4 |
| 4 | ಪುತ್ತೂರು | 1 |
| 5 | ಕಡಬ | 8 |

| ಮೊತ್ತ (₹ಲಕ್ಷಗಳಲ್ಲಿ) | | | | | |
|---|---|---|---|---|---|
| ತಾಲೂಕು | 2018-19 | 2019-20 | 2020-21 | 2021-22 | 2022-23 (ಜನವರಿ 31 ವರೆಗೆ) |
| ಬಂಟ್ವಾಳ | 49.83 | 53.80 | 213.45 | 123.06 | 32.95 |
| ಬೆಳ್ತಂಗಡಿ | - | 20.42 | 54.13 | 72.73 | 12.16 |
| ಮಂಗಳೂರು | - | - | 37.60 | 30.44 | 16.92 |
| ಪುತ್ತೂರು | - | - | 3.60 | 11.89 | 8.12 |
| ಕಡಬ | 18.94 | 50.83 | 85.01 | 83.45 | 57.53 |

ಇ) ನೇತ್ರಾವತಿ ನದಿ ಪಾತ್ರದಲ್ಲಿ ಹಾಗೂ ಇತರೆ ಭಾಗಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಬಂದಿರುತ್ತದೆ.

ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮ ಕೈಗೊಂಡಿರುತ್ತದೆ.

- ಹೊಸ ಮರಳು ನೀತಿ, 2020 ರಂತೆ ಸರ್ಕಾರವು, ದಿನಾಂಕ 01.12.2021 ರಂದು ಕರ್ನಾಟಕ ಉಪಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಗಳು-2021 ನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.
- ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.
- ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A), 21 ಮತ್ತು 22 ರಡಿ ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 31-Rರ ಉಪ ನಿಯಮ 12 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

...3

- ಅದರಂತೆ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಸಹಾಯಕ ಆಯುಕ್ತರು, ಮಂಗಳೂರು ಉಪವಿಭಾಗ ಇವರ ನೇತೃತ್ವದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ತನಿಖಾ ತಂಡಗಳನ್ನು ರಚಿಸಿದ್ದು, ಸದರಿ ತಂಡಗಳು ಜಿಲ್ಲಾ ವ್ಯಾಪ್ತಿಯಲ್ಲಿ ಗಸ್ತು ಮಾಡಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಗಳನ್ನು ನಿಯಂತ್ರಿಸಲು ಕ್ರಮ ವಹಿಸುತ್ತಿವೆ.
- ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ಚಟುವಟಿಕೆಗಳು ನಡೆಯುವ ಸಂಭವವಿರುವ 10 ಸ್ಥಳಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಿ ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ.
- 2020-21 ನೇ ಸಾಲಿನಿಂದ 2022-23 ನೇ ಸಾಲಿನ ಜನವರಿ-2023 ರ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿ ಪತ್ತೆ ಹಚ್ಚಿದ ಪ್ರಕರಣಗಳು, ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| ವರ್ಷ | ಪತ್ತೆಯಾದ ಪ್ರಕರಣಗಳ ಸಂಖ್ಯೆ | ಸಂಗ್ರಹಣೆಯಾದ ದಂಡದ ಮೊತ್ತ (₹ಲಕ್ಷ ಗಳಲ್ಲಿ) | ಎಫ್.ಐ.ಆರ್/ ಖಾಸಗಿ ಫಿರ್ಯಾದಿಗಳ ಸಂಖ್ಯೆ |
|---|---|---|---|
| 2020-21 | 55 | 13.69 | 8 |
| 2021-22 | 117 | 41.28 | 8 |
| 2022-23 (ಜನವರಿ-2023 ರ ವರೆಗೆ) | 36 | 20.00 | 6 |
| ಒಟ್ಟು | 208 | 74.97 | 22 |

ಸಂಖ್ಯೆ ಸಿಐ-ಎಂಎಂಎನ್/36/2023

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

# Sand Quarry Leases

| Sl. No. | Name of the Taluk | Name of the River Bed | Name of the Block | Extent (Acers) | Date of Execution | Name of Sucessful Bidder |
|---|---|---|---|---|---|---|
| 1 | Bantwala | Phalguni | Gurupura-1,Badagabelluru | 7.16 | 14.11.2018 | Chandrahas |
| 2 | | Nethravathi | Kadeshivalaya-1 | 6.92 | 26.12.2019 | Charan Kumar |
| 3 | Belthangady | | Petrame | 4.38 | 26-12-2019 | Joy K A |
| 4 | | | Thekkar-1 | 5.07 | 08-01-2020 | Adam B |
| 5 | | | Thekkar-2 | 5.17 | 19-12-2019 | Krishna Naik |
| 6 | | | Barya-1 | 5.17 | 26-12-2019 | Thaniyappa |
| 7 | | | Barya-2 | 5.07 | 17-12-2019 | Ibrahim P |
| 8 | Puttur | Kumaradhara | Alankaru-2 | 5.07 | 14-11-2018 | Krishnamurthy E |
| 9 | | | Savanuru-2 | 5.02 | 26-12-2019 | Chinnappa K |
| 10 | | | Perabe-1 | 5.22 | 26-12-2019 | Monappa Gowda |
| 11 | | | Perabe-2 | 6.37 | 26-12-2019 | Eliyas P P |
| 12 | Sullia | | Kenya-1 | 5.06 | 10-02-2020 | Subramanya K |
| 13 | Puttur | | Koila-2 | 5.17 | 25-02-2020 | Ramakrishna Naik |
| 14 | Mangaluru | Phalguni | Kulavuru | 5.07 | 17-03-2020 | Praveen Alva |
| 15 | Kadaba | Kumaradhara | Koila-1 | 5.07 | 20.11.2020 | B. Abdul Latheef |
| 16 | Puttur | | 34-Nekkiladi 108 | 7.91 | 25.01.2021 | S. Anand |
| 17 | Kadaba | | Alankaru-1 | 5.56 | 25.01.2021 | S. Anand |
| 18 | Bantwala | Nethravathi | Baalthilla | 8.12 | 24.11.2022 | Ravi Shankar |
| 19 | Mangalore | Phalguni | Mogaru | 1.5 | 21.11.2022 | Mohammed Ashraf |
| 20 | Mangalore | Phalguni | Mogaru | 2.5 | 25.11.2022 | Rajendra Menda |
| 21 | Mangalore | Phalguni | Adduru | 3.31 | 25.11.2022 | Mohammed Zakariya |

CI-36-MMN-2023.

Deputy Director (Min. Admn)
Dept. of Mines & Geology
Bangalore-560001